ಆ. ಈ ಯೋಜನೆಯು ಉದ್ದಿಮೆದಾರರಿಗೆ ಸಮಾಧಾನ ಉಂಟುಮಾಡಿದೆಯೇ ;

ಇ. ಹಾಗಿದ್ದಲ್ಲಿ ಎಷ್ಟು ಉದ್ದಿಮೆದಾರರು ತಮ್ಮ ಉದ್ದಿಮೆಗಳನ್ನು ಬೀದರ್ ಜಿಲ್ಲೆಯಲ್ಲಿ 1982-83ರಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸಿರುವರು ;

ಶ್ರೀ ಎಸ್. ಆರ್. ಬೊಮ್ಮಾಯಿ, (ಕೈಗಾರಿಕಾ ಮಂತ್ರಿಗಳು).-

ಆ. ಭಾರತ ಸರ್ಕಾರದವರು ಕೈಗಾರಿಕಾ ರಹಿತ ಜಿಲ್ಲೆಗಳಿಗಾಗಿ ಕೆಲವೊಂದು ವಿಶೇಷ ಸವಲತ್ತುಗಳನ್ನು ದಿನಾಂಕ 1-4-83ರಂದು ಜಾರಿಗೆ ಬರುವಂತೆ ಪ್ರಕಟಿಸಿದ ನಂತರ ಈ ಕೆಳಕಂಡ ಕೆಲವೊಂದು ಹೆಚ್ಚಿನ ಸವಲತ್ತುಗಳನ್ನು ನೀಡಲಾಗಿದೆ.

1. ರಾಜ್ಯ ಸರ್ಕಾರದಿಂದ ಪ್ರತಿಯೊಂದಕ್ಕೂ 25 ಲಕ್ಷ ರೂ.ಗಳಂತೆ 300 ಲಕ್ಷ ರೂ.ಗಳು ಬಂಡವಾಳವಿರುವಂತಹ ಅಥವಾ 100 ಜನರಿಗೆ ಖಾಯಂ ಉದ್ಯೋಗ ಕಲ್ಪಿಸಿಕೊಟ್ಟ ಮೊದಲನೇ 10 ಭಾರಿ ಹಾಗೂ ಮಧ್ಯಮ ಉದ್ದಿಮೆಗಳಿಗೆ ಕೊಡುವುದು.

2. 50 ಲಕ್ಷದಿಂದ 300 ಲಕ್ಷ ರೂ.ಗಳ ಬಂಡವಾಳವಿರುವಂತಹ, ಅಥವಾ 100 ಜನರಿಗೆ ಖಾಯಂ ಉದ್ಯೋಗ ನಿರ್ಮಿಸಿಕೊಟ್ಟಂತಹ ಉದ್ಯಮಗಳಿಗೆ ಶೇಕಡ 5 ರಷ್ಟು ಸಹಾಯಧನ ಅವರ ಸ್ಥಿರ ಆಸ್ತಿಯ ಮೇಲೆ ನೀಡುವುದು.

3. 100 ಲಕ್ಷ ರೂ.ಗಳು ಮೀರದಂತೆ ಭಾರಿ ಹಾಗೂ ಮಧ್ಯಮ ಉದ್ಯಮಗಳಿಗೆ ಅಭಿವೃದ್ಧಿ ಸಾಲವನ್ನು ನೀಡುವುದು. ಚಿಕ್ಕ ಉದ್ಯಮಗಳಿಗೆ ಸಾಲವನ್ನು 15 ಲಕ್ಷ ರೂ.ಗಳಿಗೆ ಮೀರದಂತೆ ನೀಡುವುದು.

4. ಎಕರೆಗೆ 15,000 ರೂ.ಗಳಂತೆ ಸವಲತ್ತು ದರದಲ್ಲಿ ಜಮೀನು ಡೆಫರ್ಡ್ ಪೇಮೆಂಟ್ ಆಧಾರದ ಮೇರೆಗೆ ಕೊಡುವುದು.

5. 5 ವರ್ಷಗಳ ಕಾಲ ವಿದ್ಯುಚ್ಛಕ್ತಿ ಕೋತಾ ಆಗದಂತೆ ವಿದ್ಯುಚ್ಛಕ್ತಿಯನ್ನು ಪೂರೈಸುವುದು.

ಸಾಮಾನ್ಯ ಸೌಲತ್ತುಗಳು :—

ಬೀದರ್‌ಗೆ ಹೋಗುವ ರಸ್ತೆಗಳನ್ನು ಸುಧಾರಿಸುವುದು.

110/33 ಕೆ. ವಿ. ಸಬ್ ಸ್ಟೇಷನ್ ನಿರ್ಮಿಸಿ ಡಬಲ್ ಸರ್ಕ್ಯೂಟ್ ಲೈನ್ ದುಮನಾಬಾದ್‌ನಿಂದ ಬೀದರ್‌ಗೆ ಹಾಕುವುದು.

ಕೈಗಾರಿಕಾ ಪ್ರದೇಶ ಸ್ಥಾಪಿಸುವುದಕ್ಕಾಗಿ ಜಿಲ್ಲೆಯಲ್ಲಿ ಅಗತ್ಯವಾದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದು.

ದೂರವಾಣಿ, ಟೆಲೆಕ್ಸ್ ಅಲ್ಲದೆ ಬೀದರ್ ಮತ್ತು ಬೆಂಗಳೂರು ನಡುವೆ ಎಸ್.ಟಿ.ಡಿ. ಸೌಲಭ್ಯಗಳನ್ನು ನೀಡುವುದು.

ತರಬೇತಿ ವ್ಯವಸ್ಥೆ, ಗೃಹ ನಿರ್ಮಾಣ ವ್ಯವಸ್ಥೆ, ಆಸ್ಪತ್ರೆ ವ್ಯವಸ್ಥೆ, ಅಲ್ಲದೆ ಬೇರೆ ಬೇರೆ ಸಂಸ್ಥೆಗಳಿಂದ ಧನಸಹಾಯದ ವ್ಯವಸ್ಥೆ.

ಆ. ಹೌದು.

ಇ. 157 ಸಣ್ಣ ಕೈಗಾರಿಕಾ ಘಟಕಗಳನ್ನು 83-84ರಲ್ಲಿ ಸ್ಥಾಪಿಸಲಾಗಿದೆ. 27 ಕೈಗಾರಿಕಾ ಉದ್ದಿಮೆಗಳಿಗೆ ಪರವಾನಗಿಗಳು ಹಾಗೂ ಲೆಟರ್ಸ್ ಆಫ್ ಇಂಟೆಂಟ್‌ಗಳು ನೀಡಲಾಗಿದ್ದು ಅವುಗಳು ಇನ್ನೂ ಉತ್ಪಾದನೆಯನ್ನು ಪ್ರಾರಂಭಿಸಿಲ್ಲ ಅವುಗಳು ಬೇರೆ ಬೇರೆ ಹಂತದಲ್ಲಿವೆ.

Mr. Speaker : Question Hour is over.

ANNOUNCEMENT

Mr. Speaker.—I have received the following message from the Chairman, Legislative Council :—

"As required by Rule 115 of the Rules of Procedure and Conduct of Business Council, I transmit herewith the Karnataka Lokayukta Bill. 1984 for the concurrence of Legislative Assembly to the amendments effected to by the Legislative on 21st March, 1984."

Now matters under rule 334.

MATER UNDER RULE 334

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಪಂಪಾಪತಿಯವರು—ಸದಸ್ಯರು ಗೈರುಹಾಜರಾಗಿದ್ದಾರೆ. ಮಾನ್ಯ ಸದಸ್ಯರಾದ ಮಹಾದೇವ್—ಸದಸ್ಯರು ಗೈರುಹಾಜರಾಗಿದ್ದಾರೆ.

(i) Re : Failure of Hand pump at Katapadi, Udupi Taluk.

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೆ, ಉಡುಪಿ ತಾಲ್ಲೂಕಿನ ಕಾಪು ಕ್ಷೇತ್ರದ ಕಟಪಾಡಿಯಲ್ಲಿ ಕೊಳವೆ ಬಾವಿಯ ಮೂಲಕ ಕುಡಿಯುವ ನೀರಿನ ಸರಬರಾಜು ಆಗುತ್ತಿದ್ದು ಈ ಯೋಜನೆಯಿಂದ ಸುಮಾರು 300 ಮನೆಗಳಿಗೆ ಪ್ರಯೋಜನವಾಗುತ್ತಿತ್ತು. ಪಂಪು ಕೆಟ್ಟುಹೋಗಿ ಸುಮಾರು 1 ತಿಂಗಳಾಯಿತು. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದರೂ ಕೂಡ ಇಲ್ಲಿಯವರೆಗೆ ಅವರು ರಿಪೇರಿ ಮಾಡಿಲ್ಲ. ಈಗ ಅಲ್ಲಿ ನೀರು ಪೂರೈಕೆ ನಿಂತುಹೋಗಿರುವುದರಿಂದ ಅಲ್ಲಿನ ಜನರು ಸುಮಾರು ಒಂದೂವರೆ ಮೈಲಿ ದೂರದಿಂದ ನೀರನ್ನು ತರಬೇಕಾಗಿದೆ. ಆದಷ್ಟು ಬೇಗ ಕೆಟ್ಟಿರತಕ್ಕ ಈ ಪಂಪನ್ನು ರಿಪೇರಿ ಮಾಡಬೇಕು. ಒಂದು ತಾಲ್ಲೂಕಿಗೆ ಒಬ್ಬರು ಮೆಕಾನಿಕ್ ಇದ್ದಾರೆ, ಒಬ್ಬರು ಇಡೀ ತಾಲ್ಲೂಕಿನಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಮೆಕಾನಿಕ್‌ಗಳ ಹುದ್ದೆಯನ್ನು ತಾವು ಜಾಸ್ತಿ ಮಾಡಿಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಕೆಟ್ಟಿರುವ ಪಂಪ್ ರಿಪೇರಿ ಮಾಡುವುದಕ್ಕೆ ನಾನು ಆದೇಶ ಕೊಡುತ್ತೇನೆ.

(ii) Re–Encroachment of Patta and Kumki land by Forest Department.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಕುಂದಾಪುರ ಕ್ಷೇತ್ರದ ಶಂಕರನಾರಾಯಣ ಪಂಚಾಯತಿಯ ಕುಳಂಜ ಗ್ರಾಮದ ಕೆಲವು ರೈತರ ಪಟ್ಟಾ ಹಾಗೂ ಕುಮ್ಕಿ ಭೂಮಿಯನ್ನು ಅರಣ್ಯ ಇಲಾಖೆಯವರು ಆಕ್ರಮಣ ಮಾಡಿ ಗೇರು ತೋಟವನ್ನು ಮಾಡುವ ಬಗ್ಗೆ ಪ್ರಯತ್ನಿಸಿದ್ದು ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದರೂ ಯಾವ ಒಂದು ಕ್ರಮವನ್ನೂ ಕೈಗೊಳ್ಳದೆ ಇದ್ದಾರೆ. ಈ ಬಗ್ಗೆ ರೈತರು ನ್ಯಾಯಕ್ಕಾಗಿ ನ್ಯಾಯಾಲಯಕ್ಕೆ ಹೋಗುವ ಪ್ರಸಂಗ ಬಂದಿದೆ. ಸರ್ಕಾರದ ಬೇಜವಾಬ್ದಾರಿಯಿಂದ ಅಧಿಕಾರಿಗಳ ಬೇಜವಾಬ್ದಾರಿಯಿಂದ ರೈತರು ಕೋರ್ಟಿಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಸರ್ಕಾರದಿಂದ ನಾನು ಉತ್ತರವನ್ನು ಬಯಸುತ್ತೇನೆ.

Mr. Speaker.—Please bring it to the notice of the Forest Minister.

Sri A. Lakshmi Sagar.—Yes.

(iii) Re: Non auailability of Books pertaiinng to Records of right in Dharwar District.

ಶ್ರೀ ಬಿ.ಜಿ. ಬಣಕಾರ್.—ಧಾರವಾಡ ಜಿಲ್ಲೆಯಲ್ಲಿ ರೆಕಾರ್ಡ್ ಆಫ್ ರೈಟ್ಸ್ (ಆರ್.ಟಿ.ಸಿ.) ಪುಸ್ತಕವನ್ನು ರೆವಿನ್ಯೂ ಅಧಿಕಾರಿಗಳು ಜಮೀನುಗಳ ಬಗ್ಗೆ ಇಟ್ಟಿರುವುದಿಲ್ಲ. ದಾಖಲೆ ಇಲ್ಲದೆ ಇರುವುದರಿಂದ ಜಮೀನಿನ ಮಾಲೀಕರು ಯಾವುದೇ ಸಂಸ್ಥೆ ಮತ್ತು ಬ್ಯಾಂಕುಗಳಿಂದ ಸಾಲ ತೆಗೆದುಕೊಳ್ಳುವಂತಿಲ್ಲ. ಹಳೆಯ ದಾಖಲೆ ಬದಲಾಗುವಂತಿಲ್ಲ. ಯಾವುದೇ ದಾಖಲೆ ಕೂಡ ಇಲ್ಲ, ಈ ಎಲ್ಲಾ ತೊಂದರೆಗಳ ಬಗ್ಗೆ